ಬೆಳಗ್ಗೆ ಮೀಟಿಂಗ್ ಸುರುವಾಗಿತ್ತಷ್ಟೆ. ಪವನಳ ಮೊಬೈಲ್ ಕಿರುಗುಟ್ಟಿತು. ತೆಗೆದು ನೋಡಿದರೆ ಕಾಲೇಜು ಗೆಳತಿ ಶಮಾ ಬೆಂಗಳೂರಿನಿಂದ ಫೋನು ಮಾಡಿದ್ದಳು. ಗೆಳತಿಯ ಕರೆಯನ್ನು ಅಲ್ಲೇ ಕತ್ತರಿಸಲೂ ಅವಳಿಗೆ ಮನಸ್ಸು ಬರಲಿಲ್ಲ. ಆದರೆ, ಮೀಟಿಂಗ್‌ನ ಮಧ್ಯ ಮಾತನಾಡುವಂತೆಯೂ ಇರಲಿಲ್ಲ. ಬಾಯಿಗೆ ಕೈ ಅಡ್ಡ ಇಟ್ಟು, ಮತ್ತೆ ಮಾಡುವುದಾಗಿ ಪಿಸುಗುಟ್ಟಿದಳು. 'ಹೇ, ಲಿಸನ್, ಐ ಗೋಟ್ ಎಂಗೇಜ್ಡ್.' ಏರು ದನಿಯ ಶಮಾಳ ಸ್ವರದಲ್ಲಿನ ಲವಲವಿಕೆಗೆ ಸರಿಯಾಗಿ ಪ್ರತಿಕ್ರಿಯಿಸುವುದು, ಈ ಮೀಟಿಂಗಿನಲ್ಲಿ ಇಲ್ಲದಿದ್ದರೂ ಬಹುಶಃ ತನಗೆ ಸಾಧ್ಯವಾಗುತ್ತಿತ್ತೋ ಇಲ್ಲವೋ ಎಂದು ಯೋಚಿಸುತ್ತ, 'ಎಕ್ಸ್‌ಕ್ಯೂಸ್ ಮಿ; ಈಗ ಬಂದೆ' ಎಂದು ಕಾನ್ಫರೆನ್ಸ್ ಕೋಣೆಯಲ್ಲಿದ್ದ ಉಳಿದವರಿಗೆ ಸಂಜ್ಞೆಯಲ್ಲಿ ತಿಳಿಸುತ್ತ, ಪವನ ಹೊರಗಿನ ಜಗಲಿಗೆ ಓಡಿದಳು.

'ಹೇ, ಶಮಾ, ಕಂಗ್ರಾಚುಲೇಶನ್ಸ್! ಐ ಕಾಂಟ್ ಬಿಲೀವ್ ದಿಸ್!' ಆದಷ್ಟು ಮಟ್ಟಿಗೆ ಶಮಾಳ ಉಮೇದಿನ ಸ್ವರಕ್ಕೆ ಹೊಂದುವಂತಹ ಸ್ವರ ಮಾಡಿ ಹೇಳಿದಳು. ಶಮಾ ಅವಳಿಗೆ ದೂರದ ಸಂಬಂಧಿಯೂ ಆಗಿದ್ದಳು. ಆದರೆ, ಸಂಬಂಧಕ್ಕಿಂತ ಹೆಚ್ಚು ಗೆಳೆತನದ ಆತ್ಮೀಯತೆ ಅವರದು. ಎಂ.ಎಸ್ಸಿ ಮಾಡುವಾಗಲೂ ಮತ್ತೆ ಎಂ.ಬಿ.ಎ ಮಾಡುವಾಗಲೂ ನಾಲ್ಕೈದು ವರ್ಷ ಅವರಿಬ್ಬರು ಹಾಸ್ಟೆಲಿನ ಒಂದೇ ಕೋಣೆಯಲ್ಲಿ ಒಟ್ಟಿಗೆ ಇದ್ದುಕೊಂಡಿದ್ದರಿಂದ ಉಂಟಾದ ನಂಟು ಅವರನ್ನು ಹೆಚ್ಚು ಹತ್ತಿರಕ್ಕೆ ತಂದಿತ್ತು. ಹಾಗೆ ನೋಡಿದರೆ ಅವರ ಜಾತಿಯ ಸಮಾಜವು ಅದೆಷ್ಟು ಸಣ್ಣದೆಂದರೆ, ಅಲ್ಲಿ ಸಂಬಂಧಿಕರಲ್ಲದವರು ಯಾರಾದರೂ ಇದ್ದಾರೆಯೇ ಎಂದು ಅವಳಿಗೆ ಅನಿಸುತ್ತಿದ್ದುದಿತ್ತು. ಯಾರು ಸಿಕ್ಕಿದರೂ, ಅವರು ನಮಗೆ ಹೀಗೆ ಹತ್ತಿರ, ಹಾಗೆ ಸಂಬಂಧ ಎಂದು ಅವಳ ಅಮ್ಮ ಹೇಳುತ್ತಿದ್ದುದು ಅವಳಿಗೆ ನೆನಪಿದೆ. ಎಲ್ಲಿಯೇ ಇರುವ ಅವರ ಜಾತಿಸಮುದಾಯದ ಯಾರೇ ಇಬ್ಬರು ಭೇಟಿಯಾದರೂ, ಅದೆಲ್ಲಿಯೋ ಹೇಗೋ ಅವರಿಬ್ಬರಲ್ಲಿ ಸಂಬಂಧವಿದ್ದೇ ಇರುತ್ತಿತ್ತೆನ್ನುವ ಬಗ್ಗೆ ಅವಳು ಯಾವಾಗಲೂ ಕುಶಾಲು ಮಾಡುವುದಿತ್ತು.

ಅವರಿಬ್ಬರ ಮನೆಭಾಷೆ ತುಳುವಾದರೂ ಅವರೊಳಗೆ ಮೊದಲಿನಿಂದಲೂ ತುಳುವಿನಲ್ಲಿ ಮಾತನಾಡುವ ಕ್ರಮವೇ ಇರಲಿಲ್ಲ. ಕನ್ನಡದಲ್ಲಿ ಮಾತನಾಡುವಾಗಲೂ ಸರಿಯಾದ ಶಬ್ದಗಳೊಂದೂ ನೆನಪಿಗೆ ಬರದೆ ಬಾಯಿ ಕಟ್ಟುತ್ತಿತ್ತು. ಹಾಗಾಗಿ ನಿರರ್ಗಳವಾಗಿ ಇಂಗ್ಲಿಷಿನಲ್ಲೇ ಮಾತನಾಡುವ ಪರಿಪಾಠ ಬೆಳೆದು ಬಂದಿತ್ತು.

ರಾತ್ರಿ ವಿವರವಾಗಿ ಮಾತನಾಡಿ ಎಲ್ಲವನ್ನೂ ಕೇಳುವುದಾಗಿ ತಿಳಿಸಿ, ಅವಸರದಲ್ಲಿ ಮೀಟಿಂಗಿಗೆ ವಾಪಸ್ಸು ಬರುವಾಗ, ಅವಳ ಮೇಲಧಿಕಾರಿಯು ಅದಾಗಲೇ ಆದಿನದ ಬಾಂಡ್‌ಗಳ ಧಾರಣೆಗಳನ್ನು ವಿವರಿಸಲು ಸುರುಮಾಡಿಯಾಗಿತ್ತು. ಮತ್ತೆ ಸಂಜೆ ಆಫೀಸು ಮುಗಿಯುವವರೆಗೂ ಅತ್ತಿತ್ತ ನೋಡದಷ್ಟು ಕೆಲಸವಿತ್ತು. ಆವತ್ತು ತಿಂಗಳ ಮೊದಲ ದಿನವಾಗಿ, ಹೊಸ ಟೆಂಡರುಗಳನ್ನು ತೆರೆಯುವ ಸಮಯ, ಬೇರೆಬೇರೆ ಗಿರಾಕಿಗಳಿಂದ ಬಾಂಡಿನ ವಿವರಗಳನ್ನು ಕೇಳಿ ಫೋನುಗಳು ಬರುತ್ತಲೇ ಇದ್ದವು.